

# ಲಕ್ಷ್ಮಿ ಬಂದಾಳ

ಎಫ್.ಎಂ. ನಂದಗಾವ
ಕಲೆ: ಅಭಿಷೇಕ್ ಹಳೇಮನಿ

ನಮ್ಮ ಮನಿಗೆ ಲಕ್ಷ್ಮಿ ಬಂದಾಳ' ರೋಜಾ ಕುಂಟಾಪಿಲ್ಲಿ ಆಟಾ ಆಡಕೋತ, ತನ್ನ ಬಲಗಾಲಿನ ಪಾದದಿಂದ ವಟಪೆಯನ್ನು ಚಿಮ್ಮುತ್ತಾ ಹೇಳಿದಳು.

'ಹೌದೇನ? ಮೂಲಿ ಮನಿ ಪರಾಂಜಪೆ ಲಕ್ಷ್ಮೀನ ಏನ್? ರೊಕ್ಕದ ಲಕ್ಷ್ಮೀನ? ನಿಮ್ಮ ಮನಿಗೆ ಯಾವ ಲಕ್ಷ್ಮಿ ಬಂದಾಳ?' ಪಕ್ಕದ ಮನೆ ಪದ್ಮಾ ಕೇಳಿದಳು.

'ಅದ್ಹೆಂಗ್ ಅವರ ಮನಿಗೆ ಲಕ್ಷ್ಮಿ ಬರ್ತಾಳ? ಆಕಿ ಮೊನ್ನೇನ ಪುಣೇಕ ಹೋಗ್ಯಾಳಲ್ಲಾ.'

ಜುಬೇದಾ ಬಾನು ಇನ್ನೊಂದು ಪ್ರಶ್ನೆ ಹಾಕಿದಳು.

'ಇದೇನ್ ಕೇಳ್ತಿಯ? ಲಕ್ಷ್ಮೀ ಅಂದ್ರ ರೊಕ್ಕಾನೂ ಆಗ್ತದ, ಬಂಗಾರನೂ ಆಗ್ತದ', ಪದ್ಮಾ ನುಡಿದಳು.

'ಅಯ್ಯ, ಏನ ಮಾತ ಅಂತೀನಿ, ಯಾಕ, ನಮ್ಮ ಮನಿಗೆ ಲಕ್ಷ್ಮಿ ಬರಬಾರದಾ?' ರೋಜಾ ಕುಂಟುತ್ತಾ ಮರುಪ್ರಶ್ನೆ ಹಾಕಿದಳು.

'ಹಂಗಲ್ಲ, ನೀವು ಕ್ರಿಸ್ತಾನರು. ನಿಮ್ಮ ಮನಿಗೆ ಲಕ್ಷ್ಮಿ ಯಾಕ ಬರ್ತಾಳ ಅಂತ', ಜುಬೇದಾ ಬಾನು ರಾಗ ಎಳೆದಳು.

ಮಕ್ಕಳೊಳಗ ಈ ಸಂಭಾಷಣೆ ನಡದಿತ್ತು. ರೋಜಾ ಮನ್ಯಾಗ ಪಾಟಿ ಚೀಲಾ ಇಟ್ಟ ಮೆತ್ತಗ ನೀರ ಕುಡದ ಹೊರಗ ಬರೂಮುಂದ, ಅವರ ಅವ್ವ ಮತ್ತ ಅಜ್ಜಿ ಮಾತಗಳನ್ನ ಕೇಳಿಸಿಕೊಂಡಿದ್ದಳು.

***

ಅಜ್ಜಿ ಮತ್ತು ಅವರವ್ವ ಗುಸುಗುಸು ಮಾತಾಡುವಾಗ ಒಂದೆರಡ ಮಾತುಗಳು ರೋಜಾಳ ಕಿವಿ ಮ್ಯಾಲೆ ಬಿದ್ದಿದ್ದವು.

'ಅಲ್ರಿ ಅತ್ತೆವ್ವ, ಇವತ್ತ ನಮ್ಮಿಂದ ತಪ್ಪಗಾಟ ಆತಲಾ' ಎಂದು ರೋಜಾನ ಅವ್ವ ಬ್ಯಾಸರಕಿಲಿಂದ ಮಾತ ತಗದಿದ್ದಳು. ಅದಕ್ಕ ಅವರ ಅಜ್ಜಿ 'ಇರ್ಲಿ ಬಿಡವಾ. ಮೂರು ಸಂಜಿಗೆ ಬಂಗಾರ ಮನೀಗಂತೂ ತಂದೈತಿ ಅದರಾಗ ಲಕ್ಷ್ಮಿ ಅದಾಳ. ಇದ್ದರ ಏನ ತಪ್ಪಾಯಿತ ಬಿಡವಾ. ಲಕ್ಷ್ಮಿ ಅದಾಳ ಅಂದ್ರ ಮನ್ಯಾಗ ಧನಕನಕಾ ತುಳಕ್ಯಾಡತಾವ ಅನ್ನೂದು ನಮ್ಮ ಸೀಮಿಯೊಳಗಿನ ನಂಬಿಕಿ.'

'ನಮ್ಮ ನಂಬಿಕೀನ ಬ್ಯಾರೆ. ನಾ ಹೇಳೂವಷ್ಟ ಹೇಳತೀನಿ. ನೀವಂತೂ ನಿಮ್ಮ ಹಟಾ ಬಿಡವರಲ್ಲ' ರೋಜಾನ ಅವ್ವ ಮುಖ ಸಿಂಡರಿಸಿಕೊಂಡಿದ್ದಳು.

''ಅಲ್ಲ, ನನ್ನ ಮಾತ ಕೇಳಲಾ. ನಾ ಸಣ್ಣಾಕಿದ್ದಾಗ ನಮ್ಮೂರಿಗೆ ಒಂದ ಮರಾಠಿ ಸಿನಿಮಾ ಬಂದಿತ್ತ. ಅದರ ಹೆಸರ `ಥಾಂಬ ಲಕ್ಷ್ಮಿ ಕುಂಕುಮ ಲಾವತೋ' ಅಂತಿತ್ತು'' ಅಜ್ಜಿ ಮುಖದಾಗ ಮುಗಳ್ನಗಿ ಆಡತಿತ್ತ.

'ನೀವ ಮಾತ ತಗದರ ಸಾಕು, ನೀವು ನಿಮ್ಮ ಜಮಾನಕ್ಕ ಹೋಗಿಬಿಡ್ತೀರಿ.' ಹಿಂಗ ಹೇಳಕೋತ ಎರಡೂ ಕೈಯಾಗಿನ ಬೆರಳಗಳ ಲಟಕಿ ಮುರದಳು ರೋಜಾನ ಅವ್ವ.

'ಹಂಗೇನಿಲ್ಲ, ಅದರಾಗ ಮನಿ ಹಿರಿಸೊಸಿ ಛಲೋ ಇರ್ತಾಳ. ಅಣ್ಣತಮ್ಮಂದಿರು ಕೂಡಿ ಇರೂ ದೊಡ್ಡ ಮನಿ ಅದು. ಐದೂ ಬಳ್ಳ ಸರಿ ಇರಾಂಗಿಲ್ಲ. ಮನಾನ ಮಂದಿ ನಡವಳಿಕಿ ನೋಡಿ ಬ್ಯಾಸರಾ ಮಾಡಕೊಂಡ ಅವರ ಮನ್ಯಾನ ಲಕ್ಷ್ಮಿ ಸಂಜಿ ಮುಂದ ಮನಿ ಬಿಟ್ಟ ಹೊರಗ ಹೊಂಟಿರ್ತಾಳ. ಅದನ್ನ ನೋಡಿ ಆ ಮನಿ ಹಿರಿಸೊಸಿ ಅಕ್ಕಿನ್ನ ಪಡಸಾಲ್ಯಾಗ ತಡೀತಾಳ. ಹೆಂಗಂತಿ? 'ಲಕ್ಷ್ಮವ್ವ, ಮುತ್ತೈದಿ ನೀನು, ಅರಿಶಿನ ಕುಂಕಮ ಹಚ್ಚಕೊಂಡ ಹೋಗಬೇಕು, ತಡಿ ಇಲ್ಲೇ ಇರು, ನಾ ಒಳಗ್ಹೋಗಿ ದೇವರ ಮಂಟಪದಾಗಿಟ್ಟ ಅರಿಶಿನ ಕುಂಕುಮದ ಬಟ್ಟಲಾ ತರ್ತೇನಿ' ಅಂತ ಹೇಳಿದಾಕಿನ ಒಳಗ ಹೋಗತಾಳ. ಹಿರಿಸೊಸೆ ಒಳಗ ಹ್ವಾದಾಕಿ ಬರಲೇ ಇಲ್ಲ. ನಿಂತ ನಿಂತ ಸಾಕಾಗಿ ಲಕ್ಷ್ಮವ್ವ ಅವರ ಮನ್ಯಾಗ ಕೂತಳಂತ. ಮನಿಯೊಳಗ ಬರಬೇಕಂತ ಮಾಡಿದ್ದ ದರಿದ್ರ ಲಕ್ಷ್ಮಿ ಹೊಸ್ತಿಲ